ಇ) ಪ್ರಶ್ನೆ (ಆ) ಗೆ ನೀಡಿದ ಉತ್ತರದಿಂದ ಈ ಪ್ರಶ್ನೆ ಉದ್ಭವಿಸುವುದಿಲ್ಲ.

ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯರು ಹೇಳಿದಂತೆ ಸುಮಾರು ೧೩೬ ಹಳ್ಳಿಗಳಲ್ಲಿ ಬರಗಾಲ ಪರಿಸ್ಥಿತಿ ಇತ್ತು. ೫೨ ಲಕ್ಷ ರೂಪಾಯಿಗಳನ್ನು ಖರ್ಚುಮಾಡಿ ಹೊನ್ನಾಳ್ಳಿ ತಾಲ್ಲೂಕಿನಲ್ಲಿ ೧೪೮ ಕೆಲಸಗಳನ್ನು ತೆಗೆದುಕೊಂಡಿದ್ದೇವೆ. ಅದರಲ್ಲಿ ೧೧೧ ಮುಗಿದಿದೆ. ಮತ್ತು ೫೨೫ ಕೊಳವೆಬಾವಿಗಳನ್ನು ತೆಗೆದಿದ್ದೇವೆ. ಈ ರೀತಿ ಕಾರ್ಯಕ್ರಮಗಳನ್ನು ಹೋದವರ್ಷ ಮಾಡಲಾಗಿದೆ.

ಶ್ರೀ ಡಿ. ಬಿ. ಬಸವನಗೌಡ.—ಮಾನ್ಯ ಸಚಿವರು ಹೇಳಿದ್ದನ್ನು ನಾನು ಒಪ್ಪುತ್ತೇನೆ. ನಮ್ಮ ತಾಲ್ಲೂಕಿನಲ್ಲಿ ಸತತವಾಗಿ ನಾಲ್ಕು ವರ್ಷಗಳ ಕಾಲ ಬರಗಾಲ ಬಂತು. ಸುಮಾರು ೬೫ ಹಳ್ಳಿಗಳಿಂದ ಮುಕ್ಕಾಲು ಭಾಗ ಜನರನ್ನು ಜಿಲ್ಲಾ ಪೆರಿಷತ್ತು ಮತ್ತು ಮಂಡಲ ಪಂಚಾಯಿತಿಗೆ ಕರೆದುಕೊಂಡು ಬರಬೇಕಾದರೆ ಕಷ್ಟವಾಯಿತು. ನೀವೇನೋ ಕಳಸವನ್ನೇ ತಂದು ಇಳಿಸುತ್ತೇವೆಂದು ಭರವಸೆ ಕೊಟ್ಟಿದ್ದೀರಿ. ಆದರೆ ಜನರು ನಮ್ಮನ್ನು ಬಯ್ಯುತ್ತಿದ್ದಾರೆ. ಕಂದಾಯ ಸಚಿವರು ೬೫ ಹಳ್ಳಿಗಳಿಗೆ ಕಾಮಗಾರಿ ಮಾಡುತ್ತಿಲ್ಲ. ಲೋಕೋಪಯೋಗಿ ಇಲಾಖೆಯ ಮೂಲಕವೂ ಕೆಲಸ ಆಗುತ್ತಿಲ್ಲ. ಆದ್ದರಿಂದ ಈಗಲಾದರೂ ಜಿಲ್ಲಾಧಿಕಾರಿಗಳ ಮೂಲಕ ಕೆಲಸ ಒದಗಿಸಿ ಕೊಟ್ಟರೆ ಒಳ್ಳೆಯದೆಂದು ನಾನು ಸಲಹೆ ಮಾಡುತ್ತೇನೆ.

ಶ್ರೀ ಎಸ್. ಆರ್. ಬೊಮ್ಮಾಯಿ.—ಅದನ್ನು ಪರಿಶೀಲನೆ ಮಾಡುತ್ತೇನೆ.

ಅಧ್ಯಕ್ಷರು.—ಮಾಪಮನಿಯವರೆ, ನಿಮ್ಮ ಪ್ರಶ್ನೆ ಮುಂದಕ್ಕೆ ಹೋಗಿದೆ.

ಶ್ರೀ ಬಿ. ಎಸ್. ಯಡಿಯೂರಪ್ಪ.—ಸದಸ್ಯರು ಹಾಜರಿರಲಿಲ್ಲ.

ಶ್ರೀ ಸಿ. ಜಿ. ಬೆಲ್ಲದ್.—ಸದಸ್ಯರು ಹಾಜರಿರಲಿಲ್ಲ,

ಶ್ರೀಮತಿ ಮುಸ್ತರುನ್ನಿಸಾ.—ಸದಸ್ಯರು ಹಾಜರಿರಲಿಲ್ಲ.

ಶ್ರೀ ಸಿದ್ದನಗೌಡ.—ಸದಸ್ಯರು ಹಾಜರಿರಲಿಲ್ಲ.

ದಿನದ ಪಟ್ಟಿಯಲ್ಲಿ ಸೇರಿಸಲಾದ ಪ್ರಶ್ನೋತ್ತರಗಳು

ಶಿಕಾರಿಪುರದಲ್ಲಿ ತಾಲ್ಲೂಕು ಕಛೇರಿ ಕಟ್ಟಡದ ನಿರ್ಮಾಣ

೧೦೯(೨೦೬) ಶ್ರೀ ಬಿ. ಎಸ್. ಯಡಿಯೂರಪ್ಪ (ಶಿಕಾರಿಪುರ) ಮಾನ್ಯ ಕಂದಾಯ ಯೋಜನಾ ಹಾಗೂ ಕಾರ್ಮಿಕ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೆ.—

ಅ) ಶಿಕಾರಿಪುರ ನಗರದಲ್ಲಿರುವ ತಾಲ್ಲೂಕ್ ಕಛೇರಿ ಕಟ್ಟಡ ನಿರ್ಮಿಸಿ ೧೦೦ ವರ್ಷಕ್ಕೂ ಮೇಲಾಗಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ?

ಆ) ಈಗಾಗಲೆ ಈ ಕಟ್ಟಡ ಸಂಪೂರ್ಣ ಶಿಥಿಲವಾಗಿ ಬೀಳುವ ಸ್ಥಿತಿಯಲ್ಲಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ?

ಇ) ಹಾಗಿದ್ದಲ್ಲಿ ಹೊಸ ಕಟ್ಟಡ ನಿರ್ಮಿಸುವ ಬಗ್ಗೆ ಸರ್ಕಾರದವರು ಏನಾದರೂ ಯೋಚಿಸಿದ್ದಾರೆಯೇ?

ಶ್ರೀ ಎಸ್. ಆರ್. ಬೊಮ್ಮಾಯಿ (ಕಂದಾಯ ಯೋಜನಾ ಹಾಗೂ ಕಾರ್ಮಿಕ ಸಚಿವರು).—

ಅ) ಹೌದು.

ಆ) ಇಲ್ಲ.

ಇ) ಇಲ್ಲ.

ಅಲ್ಪಸಂಖ್ಯಾತರ ಅಭಿವೃದ್ಧಿ ನಿಗಮಕ್ಕೆ ಪಣ ಬಿಡುಗಡೆ ಮಾಡಿರುವ ಬಗ್ಗೆ

೧೧೪(೧೩೫) ಶ್ರೀಮತಿ ಮುಮ್ತಾರುನ್ನೀಸ (ನರಸಿಂಹರಾಜ).—ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದೆಯೆಯಿಟ್ಟು ಉತ್ತರಿಸುವರೆ::—

ಅ) ಕರ್ನಾಟಕ ಅಲ್ಪಸಂಖ್ಯಾತರ ಅಭಿವೃದ್ಧಿ ನಿಗಮಕ್ಕೆ ಗೊತ್ತುಪಡಿಸಿರುವ ಒಟ್ಟು ಮೊತ್ತ (ಆಯವ್ಯಯ) ?